5. ಸಮಿತಿಯು ಅಧ್ಯಯನ ಸಮಯದಲ್ಲಿ ಅವಶ್ಯಕತೆ ಎನಿಸಿದಲ್ಲಿ ಕ್ಷೇತ್ರ ಭೇಟಿ ನೀಡುವುದು, ಹಾಗೂ ಯಾವುದೇ ಇಲಾಖೆಯಿಂದ ಮಾಹಿತಿ ಅವಶ್ಯಕತೆ ಎನಿಸಿದಲ್ಲಿ ಪಡೆದುಕೊಳ್ಳಲು ಸಹಾ ಅನುಮತಿ ನೀಡಲಾಗಿದೆ.

6. ಸಮಿತಿಗೆ ಅವಶ್ಯಕತೆ ಎನಿಸುವ ಸಂಬಂಧಪಟ್ಟ ಇಲಾಖೆಗಳಿಂದ ಅಧಿಕಾರಿಗಳನ್ನು ಚರ್ಚೆಗೆ ಕರೆಸಿಕೊಳ್ಳಲು ಅನುಮತಿ ನೀಡಿದೆ.

7. ಸಮಿತಿಯ ಸದಸ್ಯರುಗಳು ಸರ್ಕಾರಿ ನಿಯಮಗಳ ಪ್ರಕಾರ ಭತ್ಯೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಯಾವ ರೀತಿ ವಚನ ಕೊಟ್ಟಿದ್ದರೋ, ಆ ರೀತಿ ಇಂದು ಸಮಿತಿ ರಚಿಸಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಇದರ ಜೊತೆಗೆ, ಈಗಾಗಲೇ ರಾಜ್ಯದಲ್ಲಾಗಿರುವ ಆತ್ಮಹತ್ಯೆ ಪ್ರಕರಣಗಳೇನಿವೆ, ತಮ್ಮ ಅಧಿಕಾರಗಳ ಮಾಹಿತಿ ಪ್ರಕಾರವೇ 33-35ರಷ್ಟು ನಡೆದಿವೆ. ಹೊರಗಿನ ಮಾಹಿತಿ ಪ್ರಕಾರ 60ರಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಾವು ಮ್ಯಾಜಿಸ್ಟೇರಿಯಲ್ ತನಿಖೆ ಬಗ್ಗೆ ಸೂಚಿಸಿದ್ದೀರಿ, ಬಹಳಷ್ಟು ಕೇಸುಸ್‌ನಲ್ಲಿ ಆಗಲಿಲ್ಲ. ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಲ್ಲಿ ಸಾಲ್ವು ಕುಟುಂಬಗಳನ್ನು ಬಿಟ್ಟರೆ, ಬೇರೆ ಯಾರಿಗೂ ಪರಿಹಾರ ಸಿಕ್ಕಿಲ್ಲ. ಹೀಗಾಗಿ, ಅಧಿಕಾರಿಗಳು ಕೊಟ್ಟಿರುವ ಪ್ರಾಥಮಿಕ ವರದಿಯಾಧಾರದ ಮೇಲೆ ಜೆನ್ಯುಯನ್ ಕೇಸ್ ಇರುವ ಕುಟುಂಬದವರಿಗೆ ತಕ್ಷಣ ಪರಿಹಾರ ಕೊಡುವ ವ್ಯವಸ್ಥೆಯಾಗಬೇಕು. ಅಲ್ಲದೆ, ನಿಯಮ 69ರಡಿಯಲ್ಲಿ ಪ್ರಸ್ತಾಪಿಸಲಾದ ಚರ್ಚೆ ಅರ್ಧ ಮುಗಿದಿದೆ. ಬೆಳಿಗ್ಗೆಯಿಂದ ಇಲ್ಲಿಯವರೆಗೆ 3 ಬಿಲ್‌ಗಳನ್ನು ನಾವು ಪಾಸ್ ಮಾಡಿದ್ದೇವೆ. ನಾವು ಪೂರ್ಣ ಸಹಕಾರ ಕೊಡುತ್ತಿದ್ದೇವೆ. ನಿನ್ನೆ ಒಂದು ಕಾಂಟ್ರೊವರ್ಷಿಯಲ್ ಬಿಲ್ ಇತ್ತು. ಅದೂ ಪಾಸ್ ಆಯಿತು. ರೂಲ್ 69ರಡಿಯಲ್ಲಿ ನಿನ್ನೆ 2-3 ಜನ ಶಾಸಕರು ಮಾತನಾಡಿದ್ದು, ಇದನ್ನು ಮುಂದಿನ ಸೆಷನ್‌ವರೆಗೆ ಡಿಸ್ಕಷನ್ ಮಾಡುವುದಕ್ಕಾಗುವುದಿಲ್ಲ. ರೈತರು ಸಾಕಷ್ಟು ನೊಂದಿದ್ದಾರೆ. ಅದರ ಬಗ್ಗೆ ಬೆಳಕು ಚೆಲ್ಲಬೇಕು. ಇನ್ನೂ ಸಾಕಷ್ಟು ಜನ ಶಾಸಕರು ಇದರ ಬಗ್ಗೆ ಮಾತನಾಡುವವರಿದ್ದಾರೆ. ಸಹಕಾರ ಮಸೂದೆ ಬಗ್ಗೆ ಸಹ ಸಾಕಷ್ಟು ಜನರು ಮಾತನಾಡುವವರಿದ್ದಾರೆ. ಇದು ಒಂದು ಸಲ ಚರ್ಚೆ ಪ್ರಾರಂಭವಾದರೆ ಬಹುಶಃ ಒಂದೆರಡು ಗಂಟೆಗಳಲ್ಲಿ ಮುಗಿಯುವುದಿಲ್ಲ. ಮತ್ತೆ ಇದು ವಿಧಾನ ಪರಿಷತ್ತಿಗೆ ಹೋಗಿ ಪಾಸ್ ಆಗಬೇಕು. ಆ ಸದನಕ್ಕೂ ಇಂದೇ ಕೊನೆ ದಿನ. ಆದುದರಿಂದ, ನಿಯಮ 69ರಡಿಯಲ್ಲಿ ಪ್ರಸ್ತಾಪಿಸಲಾದ ಚರ್ಚೆ ಮುಂದುವರಿಸಿದರೆ ಒಂದೆರಡು ಗಂಟೆಗಳಲ್ಲಿ ಮುಗಿಸಬಹುದು. ಇನ್ನೂ ಪ್ರಶ್ನೋತ್ತರ, ಶೂನ್ಯವೇಳೆಯ ಬಹಳ ಪ್ರಮುಖ ವಿಷಯಗಳಿವೆ. ಆದುದರಿಂದ, ನಿಯಮ 69ರಡಿಯಲ್ಲಿ

ಪ್ರಸ್ತಾಪಿಸಲಾದ ವಿಷಯದ ಚರ್ಚೆಗೆ ಮೊದಲ ಆದ್ಯತೆ ಕೊಡಬೇಕು. ತಾವೇನು ತೀರ್ಮಾನಿಸುತ್ತೀರೋ ಮಾಡಿ.

ಅಧ್ಯಕ್ಷರು: ಸರ್ಕಾರದವರೇನು ಹೇಳುತ್ತಾರೆಯೋ ನೋಡೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ವಿ.ವಿ. ಮಸೂದೆಯನ್ನು ಮಂಡಿಸಲು ಇದ್ದ ಕಾವು ಮತ್ತು ತಿಳುವಳಿಕೆಗಳು ಏನೆಂಬುದು ಗೊತ್ತು. ಮಾನ್ಯ ಸಚಿವರು ಬಹಳ ಸಮರ್ಥವಾಗಿ ಬಹುಶಃ ಸದನ ಕೇಳಿರುವ ಭಾಷಣಗಳಲ್ಲೇ ಅಪರೂಪದ ಭಾಷಣ ಮಾಡಿ ಸದನದ ಎಲ್ಲಾ ವರ್ಗದ, ಎಲ್ಲಾ ಕಡೆಯ ಶಾಸಕರ ಮನ್ನಣೆ ಮತ್ತು ಅಭಿಮಾನವನ್ನು ನಿನ್ನೆ ಗಳಿಸಿದರು. ಜೊತೆಗೆ, ಈ ತಿದ್ದುಪಡಿಯ ಹಿಂದೆ ಸರ್ಕಾರ ಯಾವುದೇ ದುರುದ್ದೇಶವನ್ನಿಟ್ಟುಕೊಂಡಿಲ್ಲ, ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳು ಇದನ್ನು ತೀರ್ಮಾನ ಮಾಡಬೇಕೆಂಬ ವಿಚಾರದಲ್ಲೂ ಸರ್ಕಾರ ಯಾವುದೇ ದುರುದ್ದೇಶವಿಟ್ಟುಕೊಂಡಿಲ್ಲವೆನ್ನುವ ಮನವರಿಕೆ ನಮಗೆಲ್ಲರಿಗೂ ಆದಮೇಲೆ, ಯಾವ ರೀತಿ ನಾವು ವಿ.ವಿ.ಮಸೂದೆಗೆ ತಿದ್ದುಪಡಿಗಳನ್ನು ಮಂಜೂರು ಮಾಡಿಕೊಟ್ಟೆವು ಎಂಬುದು ತಮಗೆ ಗೊತ್ತಿದೆ.

ಅಧ್ಯಕ್ಷರು: ನಿನ್ನೆ ವಿ.ವಿ. ಮಸೂದೆ ಬಗ್ಗೆ ಎಷ್ಟು ವಿರೋಧವಿತ್ತೋ, ಅಷ್ಟೇ ಸುಲಭವಾಯಿತು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಕೆಲವು ಸನ್ನಿವೇಶಗಳಲ್ಲಿ ತಾವು ತೆಗೆದುಕೊಂಡಿರುವ ತೀರ್ಮಾನಗಳು ಮತ್ತು ಮುಖ್ಯಮಂತ್ರಿಗಳ ತೀರ್ಮಾನಗಳು ಆ ರೀತಿ ಆಗುತ್ತವೆ. ಅದೇ ರೀತಿ ಸಹಕಾರ ಇಲಾಖೆಗೆ ತಿದ್ದುಪಡಿಗಳಾದರೆ ನಮಗೆ ಅದರಿಂದೇನೂ ದುಃಖವಾಗುವುದಿಲ್ಲ, ಸಂತೋಷವೇ ಆಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ನಿನ್ನೆ ಅವರ ಭಾಷಣ ಕೇಳ ಹೇಗೆ ಆ ಬಿಲ್ ಪಾಸ್ ಮಾಡಿಕೊಟ್ಟಿರಿ? ಈಗಲೂ ಕೂಡ ನೀವು ಚರ್ಚೆ ಮಾಡಿ, ಅವರು ಉತ್ತರ ಕೊಟ್ಟ ನಂತರ, ಮತ್ತೆ ತಾವು ಸಂತೋಷಪಡುತ್ತೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ರೈತರ ಆತ್ಮಹತ್ಯೆ ವಿಚಾರದಲ್ಲಿ ಮುಖ್ಯಮಂತ್ರಿಗಳು ಸಮಿತಿ ರಚಿಸುತ್ತೇವೆಂದು ಹೇಳಿದ್ದರು. ವಿರೋಧಪಕ್ಷದ ನಾಯಕರು ಪರಿಹಾರದ ಬಗ್ಗೆ ಮಾತನಾಡಿದ್ದಾರೆ. ಅವರು ಸಕ್ರಿಯವಾಗಿ, ಸಕಾರಾತ್ಮಕವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಅದೇ ರೀತಿ, ಸರಿಯೋ, ತಪ್ಪೋ ಮುಖ್ಯಮಂತ್ರಿಗಳು ಅನೇಕ ಸಂದರ್ಭಗಳಲ್ಲಿ ಕಳೆದ 15 ದಿವಸಗಳಿಂದ, ಒಂದು ತಿಂಗಳಲ್ಲಿ ಮಾಡುತ್ತೇವೆಂದು ಈ ಮಾತನ್ನು ಹೇಳಿದ್ದಾರೆ. ನೀರಾ ಇಳಿಸುವ ವಿಚಾರದಲ್ಲಿ ಸೈಂಟಿಫಿಕ್ ಆಗಿ ರಿಪೋರ್ಟ್ ಬರುವುದಾದರೆ, ಪ್ರಾಯೋಗಿಕವಾಗಿ ಕನ್ಸಿಡರ್ ಮಾಡಿದರೆ ತಪ್ಪೇನೂ ಇಲ್ಲ. ಎಕ್ಸೈಸ್ ಆಕ್ಟನ್ ಆಗಿದೆ. ಜುಲೈ ಒಂದರಿಂದ ಎಕ್ಸೈಸ್ ಇಯರ್ ಪ್ರಾರಂಭವಾಗಿದೆ. ಅದರಿಂದ ಆರ್ಥಿಕವಾಗಿ ಖಜಾನೆ ಮೇಲೆ ಆಗುವ

ಪರಿಣಾಮಗಳೇನೆಂಬುವ ಅರಿವು ನಮಗೆಲ್ಲಾ ಇದೆ. ನಿನ್ನೆ ಯಾವ ರೀತಿ ಡಾ॥ಪರಮೇಶ್ವರ್‌ರವರು ನಮ್ಮ ಮನಸ್ಸನ್ನು ಒಲಿಸಿದರು, ಆ ರೀತಿ ನೀರಾ ವಿಚಾರದಲ್ಲೂ ನಿಮ್ಮ ಮನಸ್ಸನ್ನು ನಾವು ಒಲಿಸಬಹುದೆನ್ನುವ ವಿಶ್ವಾಸ ನನ್ನದು. ಈಗಾಗಲೇ ದಕ್ಷಿಣ ಕನ್ನಡ, ಗುಲಬರ್ಗಾ, ರಾಯಚೂರು, ಭಾಗಶಃ ಉಡುಪಿ ಜಿಲ್ಲೆಗಳಲ್ಲಿದೆ. ಇದನ್ನು ಮಾಡಬಹುದೆಂಬುದು ನನ್ನ ಅಭಿಪ್ರಾಯ.

ಶ್ರೀ ಟಿ.ಬಿ.ಜಯಚಂದ್ರ: ಈಗ ದಕ್ಷಿಣ ಕನ್ನಡ ಮತ್ತು ಉಡುಪಿ ಬಿಟ್ಟರೆ ಬೇರೆಲ್ಲೂ ಸೇಂದಿ ಇಳಿಸುವುದು ನಡೆಯುತ್ತಿಲ್ಲ. ಈ ಬಾರಿಯ ಬಜೆಟ್‌ನಲ್ಲಿ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸೇಂದಿ ಇಳಿಸಲು ಅನುಮತಿ ನೀಡಿದ್ದನ್ನು ಹಿಂತೆಗೆದುಕೊಂಡಿರುವುದನ್ನು ನೀವೆಲ್ಲರೂ ಕೂಡ ಸ್ವಾಗತವನ್ನು ಮಾಡಿದ್ದೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ್ದು ಸರಿ ಇರಬಹುದು, ಅದು ಸರಿಯಲ್ಲ ಎಂದು ನಾನು ಅವರ ಮಾತನ್ನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಇವತ್ತು ಸುಮಾರು 40 ಪ್ರಶ್ನೆಗಳಿವೆ. ಈ ಸಾರಿ ನಾವು ಯಾವುದೇ ಅಡಚಣೆಯಿಲ್ಲದೆ, ಲೇಖಾನುದಾನ, ಪೂರಕ ಬಜೆಟ್ ಮತ್ತು ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಊಟ ಕೊಡಿಸುವಷ್ಟರ ಮಟ್ಟಿಗೆ ಸುಲಲಿತವಾಗಿ ಪಾಸ್ ಮಾಡಿ ಕೊಟ್ಟಿದ್ದೇವೆ. ಪ್ರಶ್ನೋತ್ತರದ ಜೊತೆಗೆ ಅನೇಕ ಗೌರವಾನ್ವಿತ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಮಹತ್ವಪೂರ್ಣವಾದ ವಿಚಾರಗಳನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವವರಿದ್ದಾರೆ. ಮಾನ್ಯ ಸಚಿವರು ಮಸೂದೆ ಮಂಡಿಸಲು ನಮ್ಮ ವಿರೋಧವೇನೂ ಇಲ್ಲ. ಮಾನ್ಯ ಸಹಕಾರ ಮಂತ್ರಿಗಳು ತಮ್ಮ ಮನಸ್ಸನ್ನು ಬದಲಾವಣೆ ಮಾಡಿಕೊಂಡಿದ್ದಾರೆ ಎಂದು ನಾನು ಕೇಳಿದ್ದೇನೆ. ಆ ರೀತಿ ಆಗಿದ್ದರೆ ಅದು ಬಹಳ ಸಂತೋಷದ ವಿಚಾರ. ಮಾನ್ಯ ಸದಾನಂದಗೌಡರೂ ಸೇರಿದಂತೆ ಈ ಸದನದಲ್ಲಿ ಸಹಕಾರಿ ರಂಗದವರು ಅನೇಕರು ಇದ್ದಾರೆ. ಅವರೆಲ್ಲಾ ಒಪ್ಪುವುದಾದಲ್ಲಿ ಮಸೂದೆ ಮಂಡಿಸಲು ನಮ್ಮದೇನೂ ತಕರಾರು ಇಲ್ಲ. ಆದರೆ ದಯಮಾಡಿ ಎರಡು ಗಂಟೆಗಳ ಕಾಲ ನೀರಾ ಬಗ್ಗೆ ಚರ್ಚೆ ಮಾಡಲಿಕ್ಕೆ ಮಾನ್ಯ ಅಧ್ಯಕ್ಷರು ನಮಗೆ ಅವಕಾಶವನ್ನು ಮಾಡಿಕೊಡಬೇಕು. ಅದರ ನಂತರ ಶೂನ್ಯ ವೇಳೆಯ ಪ್ರಶ್ನೆಗಳನ್ನು ತೆಗೆದುಕೊಳ್ಳಿ. ಅದಾದ ನಂತರ ಎರಡು ಮಸೂದೆಗಳು ಮಾತ್ರವೇ ಉಳಿಯುತ್ತವೆ. ಮಾನ್ಯ ಆರೋಗ್ಯ ಸಚಿವರು ಇಂದು ತರಲಿಕ್ಕೆ ಹೊರಟಿರತಕ್ಕಂಥ ಮಸೂದೆ ವಿವಾದಿತವಾಗಿಲ್ಲ. ಪರಿಸರ ಮತ್ತು ನಮ್ಮ ಯುವಕರು ದುಶ್ಚಟಗಳಿಗೆ ಒಳಗಾಗಬಾರದು ಎಂಬ ದೃಷ್ಟಿಯಿಂದಾಗಿ ಈ ಮಸೂದೆಯನ್ನು ಅವರು ತರಲಿಕ್ಕೆ ಹೊರಟಿದ್ದಾರೆ. ಅದರ ಬಗ್ಗೆಯೂ ಕೂಡ ನಾವೆಲ್ಲಾ ಮಾತನಾಡುವವರಿದ್ದೇವೆ. ದಯಮಾಡಿ ಎರಡೂ ಮಸೂದೆಗಳನ್ನು ತಡೆಹಿಡಿದು ಮೊದಲು ನಮಗೆ ನೀರಾ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಿ. ಆದಾದ ನಂತರ ಮಸೂದೆಗಳ ಬಗ್ಗೆ ಚರ್ಚೆ ಮಾಡೋಣ.

ಅಧ್ಯಕ್ಷರು: ಸರ್ಕಾರದವರು ಏನು ಹೇಳುತ್ತಾರೋ ನೋಡೋಣ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು ಈಗಾಗಲೇ ಈ ಮಸೂದೆಯನ್ನು ಮಂಡಿಸಿದ್ದಾರೆ. ನಾನು ಈಗ ಅದರ ಉದ್ದೇಶವನ್ನು ಮಾತ್ರ ಹೇಳಬೇಕಾಗಿದೆ. ಅದರ ನಂತರ ನೀವು ಚರ್ಚೆ ಮಾಡುವುದು, ಅದಕ್ಕೆ ನಾನು ಉತ್ತರ ಕೊಡುವುದು, ತಾವು ಅದಕ್ಕೆ ಬೆಂಬಲ ಕೊಡುವುದು, ಇವಷ್ಟೇ ಈಗ ಉಳಿದುಕೊಂಡಿವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಮಸೂದೆ ಬಗ್ಗೆ ಒಮ್ಮೆ ಚರ್ಚೆ ಆರಂಭವಾದರೆ ಅದು ಬೇಗನೆ ಮುಗಿಯುವುದಿಲ್ಲ. ಈ ಚರ್ಚೆಯಲ್ಲಿ ನಾವೂ ಕೂಡ ಪಾರ್ಟಿಸಿಪೇಟ್ ಮಾಡಬೇಕಾಗುತ್ತದೆ. ಇನ್ನೂ ಸಾಕಷ್ಟು ಶಾಸಕರೂ ಕೂಡ ಚರ್ಚೆಯಲ್ಲಿ ಭಾಗವಹಿಸುವವರಿದ್ದಾರೆ. ಇವತ್ತೇ ಅಧಿವೇಶನದ ಕೊನೆಯ ದಿವಸವಾಗಿದೆ. ಇಂದೇ ಈ ಮಸೂದೆ ಮಂಡಿಸಬೇಕೆಂದು ತಾವು ಏಕೆ ಹಠ ಹಿಡಿಯುತ್ತೀರಿ? ಇದು ಇನ್ನೂ ವಿಧಾನ ಪರಿಷತ್ತಿನಿಂದ ಸಹ ಅಂಗೀಕಾರವಾಗಬೇಕಲ್ಲವೇ?

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಸದಸ್ಯರುಗಳು ಇದರ ಬಗ್ಗೆ ಎಷ್ಟು ಬೇಕಾದರೂ ಚರ್ಚೆ ನಡೆಸಲಿ. ಅವರ ಸಲಹೆಗಳನ್ನೆಲ್ಲಾ ನಾವು ಕೇಳುತ್ತೇವೆ. ಈ ಮಸೂದೆ ಇಲ್ಲಿ ಪಾಸ್ ಆಗಿ ಇನ್ನೂ ಆ ಮನೆಗೆ ಹೋಗಬೇಕಾಗಿದೆ. ಇವತ್ತೇ ಕೊನೆಯ ದಿವಸವಾಗಿದೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಇವತ್ತು ಅಧಿವೇಶನದ ಕೊನೆಯ ದಿವಸ. ನಾವೆಲ್ಲಾ ಬೆಳಿಗ್ಗೆ 10 ಗಂಟೆಗೆ ಸದನಕ್ಕೆ ಬಂದಿದ್ದೇವೆ. ನಿನ್ನೆ ದಿನ ತಾವು ಕೊಟ್ಟ ಸೂಚನೆಯ ಪ್ರಕಾರವೇ ನಾವು ಸ್ವಲ್ಪ ಹೊತ್ತು ನೀರಾ ಬಗ್ಗೆ ಚರ್ಚೆ ನಡೆಸಿ ನಂತರ ವಿಶ್ವವಿದ್ಯಾನಿಲಯ ತಿದ್ದುಪಡಿ ಮಸೂದೆ ಬಗ್ಗೆ ಚರ್ಚೆ ನಡೆಸಿ ವಿವಾದಿತವಾಗಿದ್ದ ಮಸೂದೆಯನ್ನು ಒಮ್ಮತದಿಂದ ಪಾಸ್ ಮಾಡಿ ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಎರಡೂ ಕಡೆಯವರು ಸೇರಿ ಸಹಕಾರ ಕೊಟ್ಟುಕೊಂಡು ಮಸೂದೆಗಳ ಬಗ್ಗೆ ಚರ್ಚಿಸಿ ಅಂಗೀಕಾರ ಪಡೆಯಬೇಕು ಎಂದು ಏನು ಹೇಳಿದ್ದಾರೋ ಅದರಂತೆ ನಡೆಯಲು ನಾವೆಲ್ಲರೂ ನಮ್ಮ ಸಂಪೂರ್ಣವಾದಂತಹ ಸಹಕಾರವನ್ನು ಕೊಟ್ಟಿದ್ದೇವೆ. ಅನೇಕ ಮಸೂದೆಗಳಿಗೆ ನಾವು ಕಳೆದ 3-4 ದಿನಗಳಲ್ಲಿ ಮಂಜೂರಾತಿ ನೀಡಿದ್ದೇವೆ. ಬಹುಶಃ ಇಷ್ಟೊಂದು ಮಸೂದೆಗಳು ಬೇರೆ ಯಾವುದೇ ಸಂದರ್ಭಗಳಲ್ಲಿ ಅಂಗೀಕಾರವಾಗಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ. ಉಳಿದಿರುವ ಎರಡು ಮಸೂದೆಗಳಿಗೆ ಇವತ್ತೇ ಮಂಜೂರಾತಿ ನೀಡದಿದ್ದರೆ ಅಂತಹ ದೊಡ್ಡ ಪ್ರಮಾದವೇನೂ ಆಗುವುದಿಲ್ಲ. ರೂಲ್ 69ರ ಮೇರೆಗೆ ನೀರಾ ಇಳಿಸಲು ಅನುಮತಿ ನೀಡುವುದರ ಬಗ್ಗೆ ನಾವು ತೆಗೆದುಕೊಂಡಿರುವ ಚರ್ಚೆ ಬಹಳ ಮಹತ್ವವಾದುದು. ಇವತ್ತು ಪ್ರತಿಯೊಬ್ಬ ರೈತನಿಗೂ ಕೂಡ ಇದು ಆತಂಕಕಾರಿಯಾದ ವಿಚಾರ. ನೀರಾ ಇಳಿಸುವ ಪರವಾಗಿ ಅನುಮತಿ ನೀಡಲು ಇವತ್ತು ರೈತರು ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದಾರೆ. ಸರ್ಕಾರ ಇನ್ನೂ ಅದರ ಬಗ್ಗೆ ಸದನದಲ್ಲಿ ತನ್ನ ಸ್ಪಷ್ಟವಾದಂತಹ ನಿಲುವನ್ನು ಪ್ರಕಟಿಸಿಲ್ಲ. ಅದರ ಬಗ್ಗೆ ಚರ್ಚೆ ಪ್ರಾರಂಭವಾಗಿ ಈಗಾಗಲೇ ಅನೇಕ ಸದಸ್ಯರುಗಳು ಮಾತನಾಡಿದ್ದಾರೆ. ಅದು ಅರ್ಧದಲ್ಲೇ ನಿಂತಿದೆ. ಆದರೆ ಈ ಮಸೂದೆ

ಮೇಲಿನ ಚರ್ಚೆ ಏನೂ ಅರ್ಥದಲ್ಲೇ ನಿಂತಿಲ್ಲ. ನೀರಾ ಬಗೆಗಿನ ಚರ್ಚೆ ಮುಂದುವರೆಸಬೇಕು ಎಂದು ನಾವೆಲ್ಲರೂ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸದನದಲ್ಲಿದ್ದಾರೆ. ದಯವಿಟ್ಟು ಇದಕ್ಕೆ ಪರಿಹಾರ ಸೂಚಿಸಬೇಕು. ನಾವು ಇಲ್ಲಿ ಹೇಳುವ ಮಾತಿಗೆ ಬೆಲೆಯೇ ಇಲ್ಲವೇ? ಅಧಿವೇಶನದ ಕೊನೆಯ ದಿವಸವಾದ ಇಂದೇ ಈ ಮಸೂದೆ ಎರಡೂ ಕಡೆಗಳಲ್ಲಿಯೂ ಪಾಸ್ ಆಗಲಿಕ್ಕೆ ಸಾಧ್ಯವೇ? ಸರ್ಕಾರ ಏಕೆ ಹಠ ಮಾಡುತ್ತಿದೆ? ನಿನ್ನೆ ನಾವು ವಿಶ್ವವಿದ್ಯಾನಿಲಯ ಮಸೂದೆ ಬಗ್ಗೆ ರಾತ್ರಿ 9 ಗಂಟೆಯವರೆಗೆ ಆದರೂ ಚರ್ಚೆ ಮಾಡಲು ಸಿದ್ಧ ಎಂದು ಭರವಸೆ ನೀಡಿದಂತೆ ನಡೆದುಕೊಂಡು ಅದನ್ನು ಪಾಸ್ ಮಾಡಿ ಕೊಟ್ಟಿದ್ದೇವೆ. ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯ ಪ್ರಸ್ತಾಪಗಳೂ ಕೂಡ ಚರ್ಚೆ ಮಾಡಲಿಕ್ಕೆ ಇದೆ. ಇದನ್ನೆಲ್ಲಾ ಬಿಟ್ಟು ಈ ಮಸೂದೆಯನ್ನೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಏಕೆ ಹಠ ಮಾಡುತ್ತಿದ್ದೀರಿ? ಇದನ್ನೊಂದು ಪ್ರತಿಷ್ಠೆಯ ವಿಚಾರವನ್ನಾಗಿ ಏಕೆ ತೆಗೆದುಕೊಳ್ಳುತ್ತಿದ್ದೀರಿ? ಇದು ಈ ಅಧಿವೇಶನದಲ್ಲಿ ಪಾಸ್ ಆಗಲು ಸಾಧ್ಯವೇ ಇಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ನಾವೇನೂ ಇದನ್ನೊಂದು ಪ್ರತಿಷ್ಠೆಯ ವಿಚಾರವನ್ನಾಗಿ ಮಾಡಿಕೊಳ್ಳುತ್ತಿಲ್ಲ. ನೀವೇ ಇದನ್ನೊಂದು ಪ್ರತಿಷ್ಠೆಯ ವಿಚಾರವಾಗಿ ಮಾಡಿಕೊಳ್ಳುತ್ತಿದ್ದೀರಿ. ಇದರ ಬಗ್ಗೆ ಚರ್ಚೆ ಮಾಡಿ. ನೀವು ಹೇಳಿದ್ದನ್ನೆಲ್ಲಾ ನಾವು ಕೇಳುತ್ತೇವೆ. ಕಳೆದ ಅಧಿವೇಶನದಲ್ಲೂ ಸಹಾ ಇದು ಚರ್ಚೆಯಿಲ್ಲದೇ ಮುಂದಕ್ಕೆ ಹೋಗುವಂತಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್: ನಾವು ಸಹಕಾರ ಕೊಡಲಿಕ್ಕೆ ತಯಾರಿದ್ದರೂ ಕೂಡ ಈ ರೀತಿಯಾಗಿ ಇದನ್ನು ಪ್ರತಿಷ್ಠೆಯ ವಿಚಾರವನ್ನಾಗಿ ಸರ್ಕಾರ ಏಕೆ ತೆಗೆದುಕೊಳ್ಳುತ್ತಿದೆ ಎಂಬುದು ನನಗೆ ಅರ್ಥವಾಗಲಿಲ್ಲ. ಬಹುಶಃ ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇಂಟರ್‌ವೀನ್ ಮಾಡಬೇಕಾಗುತ್ತದೆ. ಪ್ರತಿಪಕ್ಷಗಳ ಮಾತಿಗೆ ಗೌರವ ಅಥವಾ ಬೆಲೆ ಸಿಗದಿರುವಂತಹ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಇದರ ಬಗ್ಗೆ ನಾವು ಚರ್ಚೆ ಮಾಡುವುದೇ ಬೇಡವೇ? ಇವತ್ತು ರಕ್ಷಾ ಬಂಧನ ಕಾರ್ಯಕ್ರಮ ಸಹ ಇದೆ. ನಿಗದಿತಗೊಂಡ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಕೆಲವು ಶಾಸಕರು ಊರಿಗೆ ಹೋಗಿದ್ದಾರೆ. ಅಂತಹ ಬಹಳಷ್ಟು ಜನ ಶಾಸಕರು ಮಸೂದೆ ಬಗ್ಗೆ ಮಾತನಾಡುವವರಿದ್ದಾರೆ. ಮಾನ್ಯ ಅರಗ ಜ್ಞಾನೇಂದ್ರರವರು ತಮ್ಮ ಊರಿನಲ್ಲಿರುವ ಬಂದ್ ಆಚರಣೆ ಸಂಬಂಧ ಇವತ್ತು ಅಲ್ಲಿಗೆ ಹೋಗಿದ್ದಾರೆ. ಅವರು ಮಸೂದೆಯಲ್ಲಿಯ ಬೇಕಾದಷ್ಟು ವಿಚಾರಗಳ ಬಗ್ಗೆ ಇಲ್ಲಿ ಬೆಳಕು ಚೆಲ್ಲುವವರಿದ್ದಾರೆ. ಸಾಕಷ್ಟು ಶಾಸಕರು ಮಾತನಾಡಿ ಕೆಲವೊಂದು ವಿಷಯಗಳ ಬಗ್ಗೆ ಸರ್ಕಾರಕ್ಕೆ ಕನ್‌ವೀನ್ಸ್ ಮಾಡಬೇಕಾಗಿದೆ. ಸರ್ಕಾರ ಇಷ್ಟೊಂದು ಹಠಕ್ಕೆ ಬಿದ್ದು ಕೊನೆಯ ದಿವಸ ಈ ಮಸೂದೆ ತರುತ್ತಿರುವುದು ಏತಕ್ಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಒಂದು ವೇಳೆ ಚರ್ಚೆ ಅರ್ಧಕ್ಕೆ ನಿಂತಿದ್ದರೆ, ಅದನ್ನು ಇಷ್ಟೇ ವಿಧಾನ ಪರಿಷತ್ತಿನಲ್ಲಿಯೂ ಸಹ ಪಾಸ್ ಮಾಡಿಸಿಕೊಳ್ಳಬಹುದು ಎನ್ನುವ ಪರಿಸ್ಥಿತಿ

ಇದ್ದಿದ್ದರೆ ಇದನ್ನು ಚರ್ಚೆಗೆ ತೆಗೆದುಕೊಳ್ಳಲು ಯಾವ ಅಡ್ಡಿಯೂ ಇರಲಿಲ್ಲ. ಈ ಅಧಿವೇಶನದಲ್ಲೇ ಇದು ಅಂಗೀಕಾರವಾಗಿ ಆಕ್ಟ್ ಆಗುತ್ತದೆಯೇ? ಇಷ್ಟೆಲ್ಲಾ ಚರ್ಚೆ ಮಾಡಿದರೂ ಇದು ಮುಂದಿನ ಅಧಿವೇಶನಕ್ಕೆ ಹೋಗುವಂತಾದ್ದೇ! ಆದ್ದರಿಂದ ಹಠ ಮಾಡಬೇಡಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೇ, ದಯವಿಟ್ಟು ನೀರಾ ಇಳಿಸುವುದರ ಬಗ್ಗೆ ಚರ್ಚಿಸಲು ಅನುಮತಿ ಕೊಡಿ.

ಅಧ್ಯಕ್ಷರು: ನಿನ್ನೆ ನಾವು ಯೂನಿವರ್ಸಿಟಿ ಬಿಲ್ ಪಾಸ್ ಮಾಡಿದಂತೆ ಸ್ವಲ್ಪ ಹೆಚ್ಚಿನ ಹೊತ್ತಿನವರೆಗೂ ಚರ್ಚೆ ನಡೆಸೋಣ. ಮಾತನಾಡುವವರೆಲ್ಲಾ ಮಾತನಾಡಲಿ. ಬೇಕಾದರೆ ರಾತ್ರಿ 8 ಗಂಟೆಯವರೆಗೂ ಕುಳಿತುಕೊಳ್ಳೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅದಕ್ಕೆ ನಾವು ಸಿದ್ಧರಿದ್ದೇವೆ. ಈಗ ನೀರಾ ಬಗ್ಗೆ ಚರ್ಚೆ ತುರು ಮಾಡೋಣ.

ಅಧ್ಯಕ್ಷರು: ನೀರಾ ಬಗ್ಗೆ ಕೇವಲ ಇನ್ನೊಂದಿಬ್ಬರು ಮಾತ್ರ ಮಾತನಾಡುವವರಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅವರು ಮಾತನಾಡುವುದೂ ಸಹ ಮುಗಿದು ಹೋಗಲಿ. ಅವರ ನಂತರ ಇನ್ನೂ ಮಾತನಾಡುವವರಿದ್ದಾರೆ.

ಅಧ್ಯಕ್ಷರು: ನಾವು ಅಜೆಂಡಾ ಪ್ರಕಾರ ಹೋಗೋಣ.

ಶ್ರೀ ಜಗದೀಶ್ ಶೆಟ್ಟರ್: ನೀರಾ ಬಗ್ಗೆ ಮೊದಲು ಮಾತನಾಡೋಣ.

ಶ್ರೀ ಕೆ.ಬಿ.ಕೋಳಿವಾಡ(ರಾಣಬೆನ್ನೂರು): ಮಾನ್ಯ ಅಧ್ಯಕ್ಷರೇ, ಸಹಕಾರಿ ಮಸೂದೆ ಕಳೆದ ಅಧಿವೇಶನದಲ್ಲೂ ಸಹಿತ ಸದನದ ಮುಂದೆ ಬಂದಿತ್ತು. ಆಗ ವಿರೋಧ ಪಕ್ಷದವರ ಒತ್ತಾಯಕ್ಕೆ ಮಣಿದು ಸರ್ಕಾರ ಈ ಮಸೂದೆಯನ್ನು ಸದ್ಯಕ್ಕೆ ಮುಂದಕ್ಕೆ ಹಾಕುವ ನಿರ್ಣಯವನ್ನು ಕೈಗೊಂಡಿತ್ತು. ಸಹಕಾರಿ ಕಾನೂನಿನ ತಿದ್ದುಪಡಿಯಾಗತಕ್ಕದ್ದು ಬಹಳ ಅವಶ್ಯಕತೆ ಇದೆ. ಕೆಲವೇ ತಿಂಗಳುಗಳಲ್ಲಿ ಸಹಕಾರ ಸಂಸ್ಥೆಗಳ ಚುನಾವಣೆಗಳು ಬರುತ್ತಿವೆ. ಅನೇಕ ಎಡರು ತೊಡರುಗಳು ಆ ಕಾನೂನಿನಲ್ಲಿವೆ. ಆ ತೊಂದರೆಗಳ ನಿವಾರಣೆಗೋಸ್ಕರ ಈ ತಿದ್ದುಪಡಿ ಮಸೂದೆ ಬಹಳ ಅವಶ್ಯಕ ಇದೆ. ಆದ್ದರಿಂದ ವಿರೋಧ ಪಕ್ಷಗಳೂ ಸಹಿತ ಸಹಕಾರ ಕೊಟ್ಟು ಈ ಮಸೂದೆ ಅಂಗೀಕಾರಕ್ಕೆ ನೆರವಾಗಬೇಕೆಂದು ಕೋರುತ್ತೇನೆ. ಮಾನ್ಯ ಸಚಿವರು ತಿದ್ದುಪಡಿ ಬಗ್ಗೆ ವಿವರಣೆ ಕೊಟ್ಟ ನಂತರ ವಿರೋಧ ಪಕ್ಷಗಳು ಅದಕ್ಕೆ ಒಪ್ಪುತ್ತಾರೆ ಎನ್ನುವ ವಿಶ್ವಾಸ ನನಗೆ ಇದೆ. ದಯಮಾಡಿ ಸಹಕಾರಿ ಕಾನೂನಿನ ತಿದ್ದುಪಡಿಯ ಮಸೂದೆಗೆ ಅವಕಾಶ ಮಾಡಿಕೊಡಬೇಕೆಂದು ನಾನೂ ಸಹಾ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಆ್ಯಕ್ಟಿನ ಏಮ್ಸ್ ಅಂಡ್ ಆಬ್ಜೆಕ್ಟೀವ್ಸ್ ಬಗ್ಗೆ ಮಾನ್ಯ ಸಚಿವರು ವಿವರಿಸಲಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಆಡಳಿತ ಪಕ್ಷದವರ ಕಡೆಗೆ ಬಹುಮತ ಇದೆ ಎಂಬ ಅರಿವು ನಮಗೆ ಇದೆ. ಈ ಮಸೂದೆ ಇಲ್ಲಿ ಪಾಸ್ ಆಗದಿದ್ದಲ್ಲಿ ಅವರು ತುರ್ತಾಗಿ ಸುಗ್ರೀವಾಜ್ಞೆಯ ಮೂಲಕ ಇದನ್ನು ಜಾರಿಗೆ ತರಬಹುದಾಗಿದೆ ಎಂಬ ಅರಿವೂ ಸಹಾ ನಮಗೆ ಇದೆ. ಇವತ್ತಿನ ಅಜೆಂಡಾ ಪ್ರಕಾರ 40 ಪ್ರಶ್ನೆಗಳಿವೆ. 30 ಶೂನ್ಯ ವೇಳೆ ಪ್ರಸ್ತಾಪಗಳಿವೆ. ಇದರ ಜೊತೆಗೆ ಗಮನ ಸೆಳೆಯುವ ಸೂಚನೆಗಳೂ ಸಹಾ ಇವೆ. ಇವೆಲ್ಲವುಗಳನ್ನೂ ಇಂದೇ ಚರ್ಚೆ ಮಾಡಿ ಮುಗಿಸುವುದು ಫಿಜಿಕಲಿ ಇಂಪಾಸಿಬಲ್ ಆಗುತ್ತದೆ. ಮಾನ್ಯ ಅಧ್ಯಕ್ಷರು, ದಯವಿಟ್ಟು ನೀರಾ ಬಗ್ಗೆ ಚರ್ಚೆ ನಡೆಸಲು ಅವಕಾಶ ಮಾಡಿಕೊಡಿ. ತಾವು ಬೇಕಾದರೆ ನೀರಾ ಬಗ್ಗೆ ಒಂದು ಗಂಟೆ ಚರ್ಚೆ ಮಾತ್ರ ಸಾಕು ಎಂದು ನಿರ್ಬಂಧ ವಿಧಿಸಲಿ. ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಪರಿಶೀಲನೆ ಮಾಡುವುದೇ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು: ಮಾನ್ಯ ಸಚಿವರು ಏಮ್ಸ್ ಅಂಡ್ ಆಬ್ಜೆಕ್ಟೀವ್ಸ್ ಬಗ್ಗೆ ಹೇಳಲಿ. ಅದರ ನಂತರ ಏನು ಮಾಡಬೇಕೆಂಬ ಬಗ್ಗೆ ಯೋಚಿಸೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅದರ ಬಗ್ಗೆ ನಮಗೆಲ್ಲಾ ಗೊತ್ತಿದೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೇ, ನಾನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಡಿ ಎಂದು ಹೇಳುತ್ತಿಲ್ಲ. ತಾವು ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆಗಳನ್ನೂ ಸಹಾ ತೆಗೆದುಕೊಳ್ಳಿ. ತಾವು ಅಜೆಂಡಾ ಪ್ರಕಾರ ಬರುತ್ತಿದ್ದೀರಿ. ಅದರಂತೆ ನೀವು ಮಸೂದೆಯ ಚರ್ಚೆಗೆ ಅವಕಾಶ ಮಾಡಿಕೊಡಿ. ಅವರು ಅದರ ಬಗ್ಗೆ ಎಷ್ಟು ಹೊತ್ತು ಬೇಕಾದರೂ ಚರ್ಚೆ ನಡೆಸಲಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಹೋದ ಸಾರಿ ಎಲ್ಲರೂ ಹೋಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಭೇಟಿ ಮಾಡಿದ್ದೆವು. ಅವರು ಅದಕ್ಕೆ ಸ್ಪಂದಿಸಿ ಶ್ರೀಮಾನ್ ಕೆ.ಹೆಚ್.ರಂಗನಾಥ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದರು. ಆ ಕಮಿಟಿಯಲ್ಲಿ ತೀರ್ಮಾನ ಮಾಡಿ, ಈಗ ಸಧ್ಯಕ್ಕೆ ಬೇಡ, ನಂತರ ಎಲ್ಲರೂ ಕುಳಿತು ಚರ್ಚೆ ಮಾಡೋಣ ಎಂದು ಹೇಳಿದರು.

ಶ್ರೀ ಡಿ.ಕೆ.ಶಿವಕುಮಾರ್: ನಿಮಗೆ ತಪ್ಪು ಮಾಹಿತಿ ಬಂದಿದೆ. ಮಾನ್ಯ ರಂಗನಾಥ್‌ರವರ ಅಧ್ಯಕ್ಷತೆಯಲ್ಲಿ ಸಬ್-ಕಮಿಟಿ ಆದ ಮೇಲೆ ಕ್ಯಾಬಿನೆಟ್‌ಗೆ ಬಂದು ಅಪ್ರೂವಲ್ ಆದ ಮೇಲೆ ಸದನದಲ್ಲಿ ಮಂಡಿಸಿರುವುದು. ನಮ್ಮ ಪಾರ್ಟಿ ವಿಷಯ ನೀವು ಬಿಟ್ಟು ಬಿಡಿ. ನಿಮ್ಮ ಧೋರಣೆ ಬಗ್ಗೆ ನೀವು ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್: ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಆಗಿಲ್ಲವೆಂದು ನಾನು ಹೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಎಲ್ಲರೂ ಕುಳಿತು ಚರ್ಚೆ ಮಾಡಿ ಇದನ್ನು ಒಂದು ಹಂತಕ್ಕೆ ತರೋಣವೆಂದು ಹೇಳಿದ್ದರು. ಆ ಧೋರಣೆಯಲ್ಲಿ ಅದನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ನೀರಾ ವಿಷಯವನ್ನು ಚರ್ಚೆಗೆ ತೆಗೆದುಕೊಂಡರೆ ಸದನದ ಎಲ್ಲಾ ಸದಸ್ಯರು ಕುಳಿತು ಚರ್ಚೆ ಮಾಡಿ ಸುಧಾರಣೆ ಮಾಡುವ ಪ್ರಯತ್ನ ಮಾಡಿದಿರಿ. ಪ್ರಾರಂಭದಲ್ಲಿ ಇದ್ದ ತಮ್ಮ ಪ್ರಯತ್ನ ಎಷ್ಟು ಯಶಸ್ವಿಯಾಗಿ ಫಲ ಕೊಟ್ಟತು ಎಂದು ನಮಗೆ ಗೊತ್ತಾಗಿದೆ. ಇವತ್ತು ತಮ್ಮಲ್ಲಿ ನಮ್ಮ ವಿನಂತಿ ಏನೆಂದರೆ, ಇದರ ಬಗ್ಗೆ ಮಾತನಾಡುವವರು ಮೂರು ನಾಲ್ಕು ಜನ ಸದಸ್ಯರಿದ್ದಾರೆ. ಮಾತನಾಡುವವರು ಮಾತನಾಡಲಿ, ಒಂದು ಗಂಟೆ ಕಾಲಾವಕಾಶ ನೀರಾಕ್ಕೆ ಕೊಡಿ, ನೀರಾದ ಬಗ್ಗೆ ಚರ್ಚೆ ಪ್ರಾರಂಭವಾಗಲಿ, ಅದಕ್ಕೆ ಉತ್ತರ ಕೊಟ್ಟ ತಕ್ಷಣ ತೆಗೆದುಕೊಳ್ಳೋಣ. ನೀವು ನನ್ನ ಈ ಬಿಲ್ ಪಾಸ್ ಮಾಡಿ ಕೊಡಿ, ಊಟ ಕೊಡಿಸುತ್ತೇನೆಂದು ಹೇಳಿದ್ದಿರಿ. ನೀವು ಊಟ ಕೊಡಿಸಲಿಲ್ಲ, ಆದರೂ ಕೂಡ ನಾವು ನಿಮ್ಮ ಮೇಲೆ ಕೋಪ ಮಾಡಿಕೊಳ್ಳಲಿಲ್ಲ.

ಅಧ್ಯಕ್ಷರು: ಲೇಟಾದರೆ ಊಟ ಕೊಡಿಸುತ್ತೇನೆಂದು ಹೇಳಿದ್ದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿನ್ನೆ ನೀವು ಹಟ ಮಾಡಿದ್ದೋ, ನಾವು ಹಟ ಮಾಡಿದ್ದೋ? ನೀವು ಧರಣಿ ಕುಳಿತಿರಿ, ನೀರಾ ವಿಷಯ ಚರ್ಚೆಯಾಗಬೇಕು, ಬೇರೆ ವಿಷಯ ಒಪ್ಪುವುದಿಲ್ಲವೆಂದು ಹೇಳಿದಿರಿ. ತಮ್ಮ ಛೇಂಬರ್‌ನಲ್ಲಿ ಮಾನ್ಯ ಸಿಂಧ್ಯರವರು ಮತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ತಮ್ಮ ಅನಿಸಿಕೆ ಮೇಲೆಯೇ ಕುಳಿತುಕೊಂಡರು. ನಾವೇ ಸರೆಂಡರ್ ಆದವೇ ಹೊರತು ತಾವು ಏನೂ ಬಗ್ಗಲಿಲ್ಲ. ಹಟ ಮಾಡುವವರು ನಾವೋ ನೀವೋ ಹೇಳಿ. ಆದರೂ ಕೂಡ ನಾವು ಚರ್ಚೆಗೆ ಒಪ್ಪಿಕೊಂಡಿದ್ದೇವೆ. ನೀವು ಹೇಳಿದ್ದನ್ನೇ ನಾವು ಒಪ್ಪಿಕೊಳ್ಳುವುದಾದರೆ ನಾವು ಹೇಳಿದ್ದು ಒಂದನ್ನೂ ನೀವು ಒಪ್ಪಿಕೊಳ್ಳಲಿಲ್ಲವಲ್ಲಾ? ಕೊಡುವುದು ತೆಗೆದುಕೊಳ್ಳುವುದು ಎರಡೂ ಇರಬೇಕು. ಸಹಕಾರ ಎಂದರೆ ಏನು? ನೀವು ಹೇಳಿದ್ದು ಕೇಳಬೇಕು, ನಾವು ಹೇಳಿದ್ದು ಕೇಳಬಾರದು ಎಂದರೆ ಹೇಗೆ?

ಶ್ರೀ ಡಿ.ವಿ.ಸದಾನಂದಗೌಡ: ತಾವು ಹಿರಿಯರಿದ್ದೀರಿ, ನಿನ್ನೆ ನಮ್ಮ ಸೌಜನ್ಯ, ನಮ್ಮ ವಿಶ್ವಾಸ ಎಷ್ಟರಮಟ್ಟಗೆ ಇತ್ತು ಎಂದರೆ ಪ್ರತಿಯೊಬ್ಬರೂ ಕೂಡ ಆ ಬಿಲ್ ಪಾಸ್ ಆದ ಮೇಲೆ ಅಭಿನಂದನೆಗಳನ್ನು ಸಲ್ಲಿಸುವ ಕೆಲಸವನ್ನು ವಿರೋಧಪಕ್ಷದ ಸದಸ್ಯರು ಮಾಡಿದ್ದಾರೆ. ನೀವು ಎಷ್ಟು ವಿರೋಧ ಮಾಡಿದರೂ ನಿಮಗೆ ಕನ್‌ವಿನ್ಸ್ ಆದ ಮೇಲೆ ಮಾನವೀಯತೆಯ ನೈಜತೆಯನ್ನು ನಾವು ನಿನ್ನೆ ಸದನದಲ್ಲಿ ತೋರಿಸಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಕೇಳುವಷ್ಟು ಸೌಜನ್ಯ ನಿಮ್ಮಲ್ಲಿ ಇದ್ದರೆ ಆ

ಪ್ರಮೇಯ ಬರುತ್ತಿರಲಿಲ್ಲ. ನೀವು ಹೇಗೆ ಪ್ರಾರಂಭ ಮಾಡಿದಿರಿ ಎಂದರೆ ಮರಣ ಶಾಸನ ಎಂದು ಹೇಳಿದಿರಿ. ಆ ಭಾಷಣ ಕೇಳಿದ ಮೇಲೆ ನೀವು ಕನ್‌ವಿನ್ಸ್ ಆದಿರಿ. ಇವರ ಭಾಷಣ ಮೊದಲು ಕೇಳಿ ನಂತರ ಮಾತನಾಡಿ.

ಶ್ರೀ ಡಿ.ಎ.ಸದಾನಂದಗೌಡ: ನೀರಾದ ಬಗ್ಗೆ ಚರ್ಚೆ ಅರ್ಧದಲ್ಲಿ ಉಳಿದಿದೆ, ಅದನ್ನು ಪೂರ್ತಿ ಮಾಡಿ.

ಅಧ್ಯಕ್ಷರು: ಸಹಕಾರಿ ಬಿಲ್ ಮಂಡಿಸೋಣ, ನಂತರ ನೀರಾ ವಿಷಯವನ್ನೂ ತೆಗೆದುಕೊಳ್ಳೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಇದೇ ರೀತಿಯಾಗಿ ಸಹಕಾರ ಕೊಡುತ್ತಾರೆಂದರೆ, ಈಗ ನೀರಾ ಬಗ್ಗೆ ಚರ್ಚೆ ಮಾಡಲಿ, ಮೂರು ಗಂಟೆ ಆದರೂ ಸಹಕಾರಿ ಬಿಲ್ಲನ್ನು ತೆಗೆದುಕೊಳ್ಳಿ, ಮೂರು ಗಂಟೆಗೆ ಬಿಲ್ ಪಾಸ್ ಮಾಡಿ ಕೊಡಬೇಕು. ಕಂಡಿಷನ್ ಹಾಕುತ್ತಿಲ್ಲ, ಕನ್‌ವಿನ್ಸ್ ಆದರೆ ನೀವು ಓಟು ಕೊಡಿ, ಕನ್‌ವಿನ್ಸ್ ಆಗದೆ ಇದ್ದರೆ ವಿರೋಧ ಮಾಡಿ.

ಶ್ರೀ ಬಿ.ಸೋಮಶೇಖರ್: ಮಾನ್ಯ ಸಭಾಧ್ಯಕ್ಷರೆ, ತಾವು ನಿನ್ನೆ ದಿವಸ ಒಳ್ಳೆಯ ಸಲಹೆ ಕೊಟ್ಟರಿ. ಎರಡೂ ಕೆಲಸಗಳು ಒಂದೇ ಆಗಿ ಅದು ಯಶಸ್ವಿಯೂ ಆಯಿತು. ಒಂದು ಕಡೆ ಸದನದಲ್ಲಿ ಚರ್ಚೆ ನಡೆದು ಮತ್ತೊಂದು ಕಡೆ ನಮ್ಮ ವಿರೋಧ ಪಕ್ಷದ ನಾಯಕರು ಕುಳಿತು ಚರ್ಚೆ ಮಾಡಿ ಒಮ್ಮತಕ್ಕೆ ಬಂದುದು ಇಲ್ಲಿ ಆದದ್ದು ಉಂಟು. ನಿನ್ನೆ ಮಾಡಿದ ಅನುಭವದ ಆಧಾರದ ಮೇಲೆ ನೀರಾ ಚರ್ಚೆಗೆ ಅವಕಾಶ ಮಾಡಿಕೊಡಿ. ಮಂತ್ರಿಗಳು ಮತ್ತು ನಮ್ಮಲ್ಲಿ ಮೂರು-ನಾಲ್ಕು ಜನ ಅಲ್ಲಿ ಕುಳಿತು ಮಾತನಾಡಿಕೊಂಡು ಬರಲಿ, ಒಮ್ಮತಕ್ಕೆ ಬಂದರೆ ಇಲ್ಲಿ ಅದನ್ನು ಅನೌನ್ಸ್ ಮಾಡಿದರೆ ನಾವು ಅದನ್ನು ಒಪ್ಪಿ ಪಾಸ್ ಮಾಡಿ ಕೊಡುತ್ತೇವೆ. ನಿಮ್ಮ ಬಿಲ್ ಪಾಸ್ ಮಾಡಬಾರದು ಎಂದು ನನ್ನ ಅಭಿಪ್ರಾಯವಲ್ಲ, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ನೀವು ಮುಂದೆ ತನ್ನಿ, ನಮ್ಮ ಚರ್ಚೆ ನಡೆಯುತ್ತಿರಲಿ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಮೂರು ಗಂಟೆ ಒಳಗೆ ಎರಡೂ ಆಗುತ್ತದೆ. This is called co-operation, not non-cooperation.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮೂರು ಗಂಟೆಗೆ ಬೇಕಾದರೆ ಅವರು ತೆಗೆದುಕೊಳ್ಳುವುದಕ್ಕೆ ತಯಾರಿದ್ದಾರೆ. ಮೂರು ಗಂಟೆಯವರೆಗೆ ಚರ್ಚೆ ಮಾಡಿ.